## ಬಂದರು ಅಂದರೆ ಬಂದರು!

ಒಂಬತ್ತನೆ ತರಗತಿಯ ಸಮಾಜ ವಿಜ್ಞಾನ ವಿಷಯದ ಅರ್ಧವಾರ್ಷಿಕ ಪರೀಕ್ಷೆಯಲ್ಲಿ 'ಬಂದರು ಎಂದರೇನು? ಕರ್ನಾಟಕದ ನಾಲ್ಕು ಉದಾಹರಣೆಗಳನ್ನು ಬರೆಯಿರಿ' ಎಂಬ ಪ್ರಶ್ನೆಗೆ ಒಬ್ಬ ವಿದ್ಯಾರ್ಥಿ ಬರೆದ ಉತ್ತರ:

'ಬಂದರು ಅಂದರೆ ದಕ್ಷಿಣ ಆಫ್ರಿಕಾದ ಕ್ರಿಕೆಟ್ ತಂಡದವರು ಕ್ರಿಕೆಟ್ ಆಡಲು ಕರ್ನಾಟಕದ ಬೆಂಗಳೂರಿಗೆ ಬಂದರು. ಪ್ರಧಾನ ಮಂತ್ರಿಗಳು ವಿಮಾನ ನಿಲ್ದಾಣದ ಉದ್ಘಾಟನೆಗೆ ಕರ್ನಾಟಕದ ಮಂಗಳೂರಿಗೆ ಬಂದರು. ಕೇಂದ್ರದ ಗೃಹಸಚಿವರು ಪೊಲೀಸ್ ಸ್ಟೇಷನ್ ಉದ್ಘಾಟನೆಗೆ ಕರ್ನಾಟಕದ ಚಿತ್ರದುರ್ಗಕ್ಕೆ ಬಂದರು. ಭಾರತದ ಉಪ ರಾಷ್ಟ್ರಪತಿಯವರು ಕರ್ನಾಟಕದ ಧರ್ಮಸ್ಥಳದ ಕಾರ್ತಿಕ ಮಾಸದ ನಾಲ್ಕನೆಯ ಸೋಮವಾರದ ಲಕ್ಷ ದೀಪೋತ್ಸವ ವೀಕ್ಷಿಸಲು ಬಂದರು'. ಇದನ್ನು ಓದಿದ ಮೇಷ್ಟು ಸುಸ್ತು




**ಮಲ್ಲಿಕಾರ್ಜುನ ಸುರಧೇನುಪುರ**

---

## ಓದಂಗಿಲ್ಲ ಅಂದ್ರ ಓದಂಗಿಲ್ಲಾ

ನಮ್ಮ ಮಗ ತನೀಶ ಅಂತೂ ಮಾತಿನ ಮಲ್ಲ. ಏಟಿಗೆ ಎದಿರೇಟು ಕೊಡದೇ ಬಿಡಲಾರ. ಆಗ ಶಾಲೆಯ ರಜಾ ದಿನಗಳಲ್ಲಿ ಅಜ್ಜನ ಮನೆಗೆ ಹೋಗುವ ಪ್ರಸಂಗ ಎದುರಾಗಿತ್ತು. ಮೊದಲೇ ಜಾಲಿ ಮೂಡಿನಲ್ಲಿ ಇರೋ ಮಕ್ಕಳು ರಜೆ ಬಂದರೆ ಬಿಡುತ್ತಾರೆಯೇ? ಎರಡ್ಮೂರು ದಿನಗಳಲ್ಲೇ ಅಜ್ಜ–ಅಜ್ಜಿಯ ತಲೆ ಕೆಟ್ಟು ಹೋಗುವಷ್ಟು ತುಂಟಾಟ.



'ನೋಡು ಪುಟ್ಟಾ ರಜಾ ಇದ್ರೇನಾತು? ದಿನಾ ಸ್ವಲ್ಪರಾ ಓದಬೇಕಲ್ಲ' ಅಜ್ಜನ ಹಿತನುಡಿ ಸಾಗಿತ್ತು.

ಇವನೋ, ಸೋಲುಪ್ಪುವ ಜಾಯಮಾನದವನೇ ಅಲ್ಲ 'ಅಜ್ಜಾ, ನೀ ಈಗ ರಿಟೈರ್ಡ್ ಆಗಿ. ಈಗಲೂ ಕೆಲಸಾ ಮಾಡ್ತಿಯೇನು? ಹಂಗಪಾ ನಾವೂ ರಜಾ ಇದ್ದಾಗ ಓದಂಗಿಲ್ಲ ಅಂದ್ರ ಓದಂಗಿಲ್ಲಾ!' ಬಂತು ನೋಡಿ ಶರವೇಗದಿಂದ ಪ್ರತ್ಯುತ್ತರ.

ಇದೀಗ ತಬ್ಬಿಬ್ಬಾಗುವ ಸರದಿ ಅಜ್ಜನದಾಗಿತ್ತು.

**ಶ್ರೀವಲ್ಲಭ ರಾ. ಕುಲಕರ್ಣಿ**